ಲ್ಲ. ಪ್ರತಿ ವರ್ಗ
ಸಾಗುತ್ತಿದ್ದರು. ಅ
ಮಾಡುತ್ತಿದ್ದ ಅಭ್ಯಾಸ.
ಕಥೆಯನ್ನು ಓದುತ್ತ
ದ ಜನಜೀವನವು
ಮರಗಳು, ನಿಸರ್ಗ,
ಅಲ್ಲಿಯ ಜನರು
ಬಂದು ನಿಲ್ಲುತ್ತಾರೆ.
ಸಿನೆಮಾ ಪ್ರದರ್ಶನ
ಕರ್‌ರು ಒಂದಿನಿತೂ
ಣಗೇಕರ್‌ರ ಬರಹದ
ಸುಂದರವಾಗಿದೆ.
ತ್ತ ಅವರ ಬರೆಹವು
ಹಿ...ುವ ಒಂದು
ರಿಂದ ತಮಗಾದ
ಸಹಾಯಕತೆಗಳನ್ನು
ಂಡಿಸಿದ್ದಾರೆ.
ಸಿದರೆ ಕನ್ನಡ ದಲಿತ
ಳಬೇಕು. ಇಂದಿಗೂ
ಗುತ್ತಿರುವ ಎರಡು
ನವರ 'ಊರುಕೇರಿ',
ರ್ಮೆಂಟ್ ಬ್ರಾಹ್ಮಣ'.
ಡಿಸಿ ಉಳಿದ ದಲಿತ
ಡಿಲ್ಲ. ಮರಾಠಿ ದಲಿತ
ನಮ್ಮ ಲೇಖಕರಲ್ಲಿ
ಆದರ ಹಿಂದಿನ
ರ್ಚಿಸಿ ಫಲವೇನು?
ಭಾವವೂ ಕನ್ನಡ

ಡಾ. ಜಿ.ಎಲ್.ಹೆಗಡೆ



DHARWAD-04

58

# ಕನ್ನಡ ಕಾವ್ಯದ ಬಹುಮುಖಿ ನೆಲೆಗಳು

• ಪ್ರೊ. ಶ್ರೀಮತಿ ದೀಪಾ ಸಂಕಪಾಳೆ

ಸಾಹಿತ್ಯ ಎನ್ನವುದು ಜೀವನದ ಪ್ರತಿಬಿಂಬ. ಬದುಕಿನಲ್ಲಿ ನಡೆದ ಅಥವಾ ನಡೆಯಬಹುದಾದ ಘಟನೆಗಳನ್ನಾಧರಿಸಿ ಸಾಹಿತ್ಯ ರಚನೆಗೊಳ್ಳುವುದು ಅದರ ಸೃಷ್ಟಿಕ್ರಿಯೆ. ಆದರೆ ಯಥಾವತ್ತಾದ ಘಟನಾವಳಿಗಳ ರಚನೆ ವರದಿಯಾಗಬಹುದಾದ್ದರಿಂದ ಅದಕ್ಕೊಂದಿಷ್ಟು ಸಾಹಿತ್ಯಿಕ ಮಸಾಲೆಗಳನ್ನು ಹಾಕಲೇಬೇಕು. ಅದು ಕೂಡ ಸಾಮಾನ್ಯ ಕೆಲಸವೇನಲ್ಲ. ಅನುಭವಿಕ, ನುರಿತ ಹಾಗೂ ಪ್ರತಿಭಾವಂತ ಕವಿಗಳಿಗೆ ಮಾತ್ರ ಆ ಬಗೆಯ ಸೃಷ್ಟಿಕಾರ್ಯ ಸಾಧ್ಯ. ಇದು ಪ್ರಸ್ತುತಗೊಳ್ಳುವ ಸಾಹಿತ್ಯದ ರಚನಾ ಸಂದರ್ಭ ಹಾಗೂ ಕಾಲಘಟ್ಟವನ್ನವಲಂಬಿಸಿದ್ದ, ಸಾಹಿತ್ಯ ಸೃಷ್ಟಿ ಯಾವುದೇ ಒಂದು ರಚನಾ ಕಾಲಕ್ಕಷ್ಟೇ ಸೀಮಿತವಾಗದೆ ಶತಶತಮಾನಕ್ಕೂ ಅದು ಪ್ರಸ್ತುತಗೊಳ್ಳುತ್ತ ಹೋಗಬೇಕು. ಅದು ಅದರ ತಾಕತ್ತು. ಅದನ್ನೇ ಭಟ್ಟತೌತ 'ನವನವೊನ್ಮೇಶಾಲಿನಿ' ಎಂದು ಹೇಳಿರುವನು. ಇಂಥ ಸಾಹಿತ್ಯ ಸೃಷ್ಟಿಗೆ ಹಳಗನ್ನಡ ಹಾಗೂ ನಡುಗನ್ನಡದ ಕಾವ್ಯಗಳು ಬಹಳಷ್ಟು ಉದಾಹರಣೆಯಾಗಿ ನಿಲ್ಲುತ್ತದೆ. ಸಾವಿರ ವರ್ಷವಾದರೂ ಸಾವಿಲ್ಲದ ಸಾಹಿತ್ಯವಾಗಿರುವುದು. ಬದುಕಿನಲ್ಲಿ ಏನಾದರು ವ್ಯತ್ಯಾಸವಾಗಬಹುದು; ಆದರೆ ಬದುಕಿನ ಸ್ವೀಕಾರಾರ್ಹ ಮೌಲ್ಯಗಳು, ಆದರ್ಶಗಳು, ತತ್ವಗಳು ಬದಲಾಗಬಾರು. ಆದರೂ ಕಾಲದ ಸೆಳೆತಕ್ಕೆ ಒಂದಿಷ್ಟು ಮೌಲ್ಯಗಳು ಅಧಃಪತನಗೊಳ್ಳುತ್ತಿರುವುದು ವಿಪರ್ಯಾಸವೇ ಸರಿ. ಈ ಮೌಲ್ಯಗಳನ್ನು ಎತ್ತಿ ಹಿಡಿಯಲು ಬದುಕನ್ನು ಸ್ವೀಕಾರಾರ್ಹಗೊಳಿಸಲು ಕನ್ನಡ ಕಾವ್ಯಗಳು ಭದ್ರ ಬೇಲಿಗಳಾಗಿ ನಿಂತಿವೆ.

ಕನ್ನಡ ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯದಷ್ಟು ಉಪಲಬ್ಧವಿರಲಿಕ್ಕಿಲ್ಲ. ಆದರೆ ಇದು ಅದರಷ್ಟೇ ಮೌಲಿಕವಾದುದು. ಬದುಕಿನ ಸವಾಲುಗಳನ್ನು ತುಂಬ ಸರಳವಾಗಿ ಪರಿಹರಿಸುವ ನಮ್ಮ ಜನಪದ ಸಾಹಿತ್ಯವನ್ನು ಜಾಗತೀಕರಣದ ಸಂಕಷ್ಟಗಳನ್ನು ಬಿಡಿಸಿಕೊಳ್ಳಲು ಬಳಸಿಕೊಳ್ಳುವ ಹೊಸ ನೆಲೆಗಳಿಂದ ಅಭ್ಯಾಸ ಮಾಡಬಹುದಾಗಿದೆ. ಈ ಅಧ್ಯಯನವು ಮಾನವ ಸಂಬಂಧಗಳನ್ನು ಗಟ್ಟಿಕೊಳಿಸುತ್ತದೆ. ಪ್ರಾಚೀನ–ಮಧ್ಯಕಾಲೀನ–ಅರ್ವಾಚೀನ–ಆಧುನಿಕ; ಜನಪದ ಕಾವ್ಯಗಳಲ್ಲಿಯ ಮಹಿಳಾ ಸಂವೇದಗಳನ್ನು ವಿಶ್ಲೇಷಿಸಿ, ವ್ಯಾಖ್ಯಾನಿಸಬೇಕಿದೆ. ಆನಪದ ಕಾವ್ಯಗಳಲ್ಲಿ ಬೆಳೆದು ನಿಂತಿರುವ ಅನೇಕ ಜ್ಞಾನ–ಶಿಸ್ತುಗಳ ಬೆಳಕಿನಲ್ಲಿ ಬಹುಶಿಸ್ತೀಯ ಅಧ್ಯಯನಗಳಿಗೆ ವಿಪುಲ ಅವಕಾಶಗಳಿವೆ. ಜೊತೆಗೆ ನಮ್ಮ ನವೋದಯ–ಪ್ರಗತಿಶೀಲ–ನವ್ಯ–ದಲಿತ, ಬಂಡಾಯ–ಮಹಿಳಾ ಕಾವ್ಯವನ್ನು ದೇಸಿ ನೆಲೆಯಲ್ಲಿ ವಿಶ್ಲೇಷಿಸಿದರೆ, ಪೂರ್ವಾಧ್ಯಯನಯದ ನಿರ್ಣಯಗಳನ್ನು ತಿದ್ದುವ ಹಾಗೂ ನಮ್ಮನ್ನು ಚಕಿತಗೋಳಿಸುವ ಹೊಸ ಫಲಿತಗಳು ಹೊರಬರುತ್ತವೆ.

ಕವಿ, ಕಾವ್ಯ ಕೇಂದ್ರಿತ ಅಧ್ಯಯನಗಳು ಸಾಕಷ್ಟು ನಡೆದಿವೆ. ಅಂಥ ಅಧ್ಯಯನಗಳು ಆ ಕಾಲದಲ್ಲಿ ಅಗತ್ಯವಾಗಿ ಬೇಕಾಗಿದ್ದವು. ನಮಗೆ ಕಾವ್ಯ ಚರಿತ್ರೆ ಕಟ್ಟಬೇಕಿತ್ತು. ಚಿಂತನೆಯ ನೆಲೆಯಲ್ಲಿ ಓದುವ ರೀತಿ ಇನ್ನೂ ಹೆಚ್ಚಬೇಕಿದೆ. ಪರಂಪರೆಯನ್ನು ಒಟ್ಟಾಗಿ ಗ್ರಹಿಸುವ, ವಿವೇಚಿಸುವ, ಕನ್ನಡ ಪ್ರಜ್ಞೆಯನ್ನು ಎಚ್ಚರಿಸುವ ಸಹಿಷ್ಣುತೆಯ ವಾತಾವರಣವನ್ನು ಮರಳಿ ರೂಪಿಸುವ ಕಾವ್ಯಾಧ್ಯಯನದ ಹೊಸ ನೆಲೆಗಳನ್ನು ಹುಡುಕದೆ ನಮಗೆ ಗತ್ಯಂತರವಿಲ್ಲ. 'ಇತ್ತೀಚಿನ ಅಧ್ಯಯನಗಳು ಆ ನಿಟ್ಟಿನ ದಾರಿ ಹಿಡಿದಿವೆ. ತೋರಿಕೆಗಾಗಿ ಅಧ್ಯಯನಗಳು ನಡೆದಾಗ ಈ ರೋಗ ಹರಡುವುದು ಸಹಜ. ನಮ್ಮ ಅಧ್ಯನಗಳು ಗ್ರಂಥಾಲಯದ ಅಲಮಾರುಗಳಿಗೆ



PRINCIPAL
J.S.S. Banashankari Arts, Commerce &
Shantikumar Gubbi Science College,
DHARWAD - 580 004.

57